# ಸರ್ಕಾರಿ ಪ್ರೌಢಶಾಲೆ, ಕುರುವಂಕ. ಅರಸೀಕೆರೆ ತಾಲ್ಲೂಕು. ಹಾಸನ ಜಿಲ್ಲೆ

## ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ – ಸೆಪ್ಟಂಬರ್ – 2019

**9 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ**

**ಸಮಯ : 01–30 ಗಂಟೆಗಳು** **ಗರಿಷ್ಠ ಅಂಕಗಳು : 40**

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 04 × 1 = 04**

1. ಇವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆ ________
   ಎ) ತುಪ್ಪಳದಂತೆ ಬಿ) ಹುಲಿದೊಗಲು ಸಿ) ಬೆಳ್ಳಗಾಗಿ ಡಿ) ಗುರುವನ್ನು
2. ಕುಸುರಿದಜಿದಡಗಿನಗತೆವೊಲೆಸೆದುವು ತದ್ವನದೊಳಿರ್ದ ಮುತ್ತದ ಮುಗುಳ್ಗಳ್. ಈ ವಾಕ್ಯದಲ್ಲಿರುವ ಅಲಂಕಾರ
   ಎ) ದೃಷ್ಟಾಂತಾಲಂಕಾರ ಬಿ) ಶ್ಲೇಷಾಲಂಕಾರ ಸಿ) ರೂಪಕಾಲಂಕಾರ ಡಿ) ಉಪಮಾಲಂಕಾರ
3. ಇವುಗಳಲ್ಲಿ ಅಂಶಿಸಮಾಸಕ್ಕೆ ಉದಾಹರಣೆ
   ಎ) ಕೊನೆಹುಬ್ಬು ಬಿ) ಕೆರೆಕಟ್ಟೆಬಾವಿಗಳು ಸಿ) ಷಡಾನನ ಡಿ) ಅರಮನೆ
4. ತಿರಿಕುಲ– ಪದದ ಅರ್ಥ
   ಎ) ನೀರು ಹರಿಸುವವರು ಬಿ) ಅಕ್ಕಸಾಲಿಗಳು
   ಸಿ) ಅಲೆಮಾರಿಗಳು ಡಿ) ರಾಟೆ ತಿರುಗಿಸಿ ನೀರು ಹರಿಸುವವರು

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 06 × 1 = 06**

5. ಮೌಲ್ವಿಯವರು ಭಾಷಣ ಮಾಡುವಾಗ ಎದುರಿಗಿದ್ದವರು ಹೇಗೆ ತೋರುತ್ತಿದ್ದರೆಂದು ಹೇಳಿದ್ದಾರೆ?
6. ಲೇಖಕರಿಗೆ ಜಯಪುರದ ಮನೆಗಳ ಮೇಲೆ ಮೋಹವೇಕೆ?
7. ಬುಕ್ಕರಾಯನ ಹಿರಿಮೆ ಏನು?
8. ಹಾಡು ನುಡಿಗುಂಡುಗಳು ಯಾವುದರ ಬೆನ್ನಟ್ಟಬೇಕು?
9. ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಏನು ಮಾಡಿದವು?
10. ರಂಜಾನ್ ಹಬ್ಬದ ಸಮಯದಲ್ಲಿ ತಯಾರಿಸುವ ಖಾದ್ಯಗಳಾವುವು?

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 5 ×2 = 10**

11. ಕನ್ನಡ ಮೌಲ್ವಿಯ ವೇಷಭೂಷಣ ಹೇಗಿತ್ತು?
12. ಲೇಖಕರ ಮೊದಲ ಅಂಬೇರ ಭೇಟಿಗೂ ಇತ್ತೀಚಿನ ಭೇಟಿಗೂ ಯಾವ ವ್ಯತ್ಯಾಸವಿತ್ತು?
13. ಈ ಹಾಡು ಹೊಸತು ಎಂದು ಕವಿ ಕಯ್ಯಾರರು ಹೇಳಲು ಕಾರಣವೇನು?
14. ಅಭಯರುಚಿಯು ಅಭಯಮತಿಗೆ ಏನೆಂದು ಧೈರ್ಯವನ್ನು ಹೇಳಿದನು?
15. ಪಂಡರಿಬಾಯಿಯವರು ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳನ್ನು ವಿವರಿಸಿ.

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 2 × 2 = 04**

16. "ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯನಿಕ್ಕುವುದು"
17. "ಚಂದಿರನೋ ಭಾಸ್ಕರನೋಯೆಂಬಂತೆ"

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಕೃತಿಗಳನ್ನು ಪರಿಚಯಿಸಿ, ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ. 1×2=2**

18. ಶಿವರಾಮಕಾರಂತ

Ramesh.K. GHS Kuruvanka. Arsikere Tq Hassan Dt. Mob 9481117477

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1 × 2 = 2**

19. ದಟ್ಟ ಕಾಡಿನಲೊಂದು__________ ಹಗಲಿರುಳು __________

__________ __________

__________ಜೋಡಿ ॥ **ಅಥವಾ** __________ ಬಂದು ॥

**ಕೊಟ್ಟಿರುವ ಪದ್ಯಭಾಗವನ್ನು ಓದಿ 3–4 ವಾಕ್ಯಗಳಲ್ಲಿ ಸಾರಾಂಶ ಬರೆಯಿರಿ:** **1 × 2 = 2**

20. ಕಿಱಿವರೆಯದ ಶುಭಲಕ್ಷಣ
ದಱಿಕೆಯ ಸತ್ಕುಲದ ಮರ್ತ್ಯಯುಗಲಕಮಂ ತಾ
ನಱಿಸಲ್ ಬಳರಿಯ ಬನದಿಂ
ಪೊಱಮಟ್ಟಂ ಚಂಡಕರ್ಮನೆಂಬ ತಳಾಱಂ

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1 × 4 = 4**

21. ರಾಧಾಕೃಷ್ಣನ್ ಅವರು ಅಧ್ಯಾಪಕರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ವಿವರಿಸಿ.

**ಅಥವಾ**

ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನೀಡಿದ ಬೀಳ್ಕೊಡುಗೆಯ ವಿಶೇಷತೆಯನ್ನು ಕುರಿತು ವಿವರಿಸಿ.

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೊಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ:** **1 × 2 = 2**

22. ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವೇನು?

**ಅಥವಾ**

ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ.

23. ನಿಮ್ಮನ್ನು ಅರಸೀಕೆರೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ರಘು/ರಾಗಿಣಿ ಎಂದು ಭಾವಿಸಿಕೊಂಡು, ನಿಮ್ಮ ಅಣ್ಣನ ವಿವಾಹದಲ್ಲಿ ಪಾಲ್ಗೊಳ್ಳಲು ಎರಡು ದಿನಗಳ ರಜೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ರಜೆ ಪತ್ರ ಬರೆಯಿರಿ. **1 × 4 = 4**

**ಅಥವಾ**

ನಿಮ್ಮನ್ನು ವಿವೇಕಾನಂದ ಪ್ರೌಢಶಾಲೆ, ಮುಂಡಗೋಡದ ವಿದ್ಯಾರ್ಥಿ ಪ್ರೀತಿ/ಪ್ರೀತಮ್ ಎಂದು ಭಾವಿಸಿಕೊಂಡು, ಹಾಸನದಲ್ಲಿ ವಾಸವಾಗಿರುವ ನಿಮ್ಮ ತಂದೆ 'ದೇವಪ್ಪ' ಎಂಬುವವರಿಗೆ ನಿಮ್ಮ ಶಾಲೆಯಲ್ಲಿ ನಡೆದ ಕ್ರೀಡಾಕೂಟದ ಕುರಿತು ಪತ್ರ ಬರೆಯಿರಿ.

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಸೆಪ್ಟಂಬರ್ – 2019

## 9 ನೆಯ ತರಗತಿ – ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

### ಮೌಲ್ಯಮಾಪನ ಸೂಚಿ (ಮಾದರಿ ಉತ್ತರಗಳು)

**ಸಮಯ : 1.30 ಗಂಟೆಗಳು** **ಗರಿಷ್ಠ ಅಂಕಗಳು : 40**

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **04 × 1 = 04**

1. ಇವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆ ________
   ಎ) ತುಪ್ಪಳದಂತೆ ಬಿ) ಹುಲಿದೊಗಲು ಸಿ) ಬೆಳ್ಳಗಾಗಿ ಡಿ) ಗುರುವನ್ನು
   ಉತ್ತರ: ಬಿ) ಹುಲಿದೊಗಲು
2. ಕುಸುರಿದಜಿದಡಗಿನಗತೆವೊಲೆಸೆದುವು ತದ್ವನದೊಳಿರ್ದ ಮುತ್ತದ ಮುಗುಳ್ಗಳ್. ಈ ವಾಕ್ಯದಲ್ಲಿರುವ ಅಲಂಕಾರ
   ಎ) ದೃಷ್ಟಾಂತಾಲಂಕಾರ ಬಿ) ಶ್ಲೇಷಾಲಂಕಾರ ಸಿ) ರೂಪಕಾಲಂಕಾರ ಡಿ) ಉಪಮಾಲಂಕಾರ
   ಉತ್ತರ: ಡಿ) ಉಪಮಾಲಂಕಾರ
3. ಇವುಗಳಲ್ಲಿ ಅಂಶಿಸಮಾಸಕ್ಕೆ ಉದಾಹರಣೆ
   ಎ) ಕೊನೆಹುಬ್ಬು ಬಿ) ಕೆರೆಕಟ್ಟೆಬಾವಿಗಳು ಸಿ) ಷಡಾನನ ಡಿ) ಅರಮನೆ
   ಉತ್ತರ: ಎ) ಕೊನೆಹುಬ್ಬು
4. ತಿರಿಕುಲ– ಪದದ ಅರ್ಥ
   ಎ) ನೀರು ಹರಿಸುವವರು ಬಿ) ಅಕ್ಕಸಾಲಿಗಳು
   ಸಿ) ಅಲೆಮಾರಿಗಳು ಡಿ) ರಾಟೆ ತಿರುಗಿಸಿ ನೀರು ಹರಿಸುವವರು
   ಉತ್ತರ: ಸಿ) ಅಲೆಮಾರಿಗಳು

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **06 × 1 = 06**

5. ಮೌಲ್ವಿಯವರು ಭಾಷಣ ಮಾಡುವಾಗ ಎದುರಿಗಿದ್ದವರು ಹೇಗೆ ತೋರುತ್ತಿದ್ದರೆಂದು ಹೇಳಿದ್ದಾರೆ?
   ಉತ್ತರ: ಮೌಲ್ವಿಯವರು ಭಾಷಣ ಮಾಡುವಾಗ ಎದುರಿಗಿದ್ದವರು ಮಕ್ಕಳಾಗಿಯೇ ತೋರುತ್ತಿದ್ದರೆಂದು ಹೇಳಿದ್ದಾರೆ.
6. ಲೇಖಕರಿಗೆ ಜಯಪುರದ ಮನೆಗಳ ಮೇಲೆ ಮೋಹವೇಕೆ?
   ಉತ್ತರ: ಜಯಪುರದಲ್ಲಿನ ಒಂದೊಂದು ಮನೆಯೂ ಒಂದೊಂದು ಶೈಲಿಯದೂ ಒಂದೊಂದು ದೇಶದ್ದೂ ಆಗಿ ಕಾಣಿಸುವುದಿಲ್ಲ. ಆದುದರಿಂದಲೇ ಲೇಖಕರಿಗೆ ಅವುಗಳ ಮೇಲೆ ಮೋಹ.
7. ಬುಕ್ಕರಾಯನ ಹಿರಿಮೆ ಏನು?
   ಉತ್ತರ: ಅರಿರಾಯ ವಿಭಾಡ ಹಾಗೂ ಭಾಷೆಗೆ ತಪ್ಪುವ ರಾಯರ ಗಂಡ ಎಂಬುದು ಬುಕ್ಕರಾಯನ ಹಿರಿಮೆ.
8. ಹಾಡು ನುಡಿಗುಂಡುಗಳು ಯಾವುದರ ಬೆನ್ನಟ್ಟಬೇಕು?
   ಉತ್ತರ: ಹಾಡು ನುಡಿಗುಂಡುಗಳು ಭಯದ ಬೆನ್ನಟ್ಟಬೇಕು.
9. ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಏನು ಮಾಡಿದವು?
   ಉತ್ತರ: ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಚೀತ್ಕರಿಸತೊಡಗಿದವು.
10. ರಂಜಾನ್ ಹಬ್ಬದ ಸಮಯದಲ್ಲಿ ತಯಾರಿಸುವ ಖಾದ್ಯಗಳಾವುವು?
    ಉತ್ತರ: ರಂಜಾನ್ ಹಬ್ಬದ ಸಮಯದಲ್ಲಿ ತಯಾರಿಸುವ ಖಾದ್ಯಗಳು ಗುಲ್‌ಗುಲೆ, ರಹಮ್ ಮತ್ತು ಸುರಕುಂಬಾ.

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **05 × 02 = 10**

**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

11. ಕನ್ನಡ ಮೌಲ್ವಿಯ ವೇಷಭೂಷಣ ಹೇಗಿತ್ತು?
    ಉತ್ತರ: ಕನ್ನಡ ಮೌಲ್ವಿಯು, ಆಜಾನುಬಾಹುವಾಗಿ ಪುಷ್ಟವಾಗಿ ಬೆಳೆದಿದ್ದ ಎತ್ತರದ ಕೆಂಪನೆಯ ಆಳು. ಮುಖದಲ್ಲಿ ಸಹ ಒಳ್ಳೆಯ ಕಳೆ ಇತ್ತು. ಕಣ್ಣಿನ ದೃಷ್ಟಿ ತೀಕ್ಷ್ಣವಾಗಿತ್ತು. ಗಡ್ಡ ಪೂರ್ಣವಾಗಿ ಬೆಳ್ಳಗಾಗಿ ಶುದ್ಧಿ

ಮಾಡಿದ ಹತ್ತಿಯ ತುಪ್ಪಳದಂತೆ ತೋರುತ್ತಿತ್ತು. ವಿಶಾಲವಾದ ಹಣೆ, ಗಂಭೀರವಾದ ಮುಖ, ಮಡಿ-ಮಡಿ ಇಸ್ತ್ರೀ ಮಾಡಿದ್ದ ಬಿಳಿಯ ಶರಾಯಿ (ಕೋಟು) ಇವುಗಳಿಂದ ಆತನನ್ನು ನೋಡುವವರಿಗೆ ಇವನೊಬ್ಬ ಮರ್ಯಾದಸ್ತ ಸದ್ಗೃಹಸ್ಥ ಎಂಬ ಭಾವನೆ ಉಂಟಾಗುತ್ತಿತ್ತು.

12. ಲೇಖಕರ ಮೊದಲ ಅಂಬೇರ ಭೇಟಿಗೂ ಇತ್ತೀಚಿನ ಭೇಟಿಗೂ ಯಾವ ವ್ಯತ್ಯಾಸವಿತ್ತು?
**ಉತ್ತರ:** ಲೇಖಕರು ಹಿಂದೆ ಅಂಬೇರಕ್ಕೆ ಹೋಗಿದ್ದಾಗ ಅಲ್ಲಿ ಜನವಸತಿ ಇದ್ದಿರಲಿಲ್ಲ. ಆಗ ಅಲ್ಲಿನ ಹಲವಾರು ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು. ಆದರೆ ಈಗ ಹಾಗಿಲ್ಲ; ನೂರಾರು ಸಿಂಧೀ ಕುಟುಂಬಗಳು ಅಲ್ಲಿ ಮನೆ ಮಾಡಿಕೊಂಡಿವೆ.

13. ಈ ಹಾಡು ಹೊಸತು ಎಂದು ಕವಿ ಕಯ್ಯಾರರು ಹೇಳಲು ಕಾರಣವೇನು?
ಉತ್ತರ: ಈ ಹೊಸ ಹಾಡು ಇದೇ ಮೊದಲ ಹಾಡಾಗಿದ್ದು ಇದಕ್ಕೂ ಮೊದಲು ಇಂತಹ ಹಾಡು ಇರಲಿಲ್ಲ. ಅಂದಿನ ಕಷ್ಟಗಳು ಅಂದಂದೇ ಮುಗಿದಿವೆ. ಇಂದು ಅವುಗಳ ಗೊಡವೆ ಇಲ್ಲ. ಆದ್ದರಿಂದ ಈ ಹಾಡು ಹೊಸತು ಹಾಡು ಎಂದು ಕವಿ ಹೇಳಿದ್ದಾರೆ.

14. ಅಭಯರುಚಿಯು ಅಭಯಮತಿಗೆ ಏನೆಂದು ಧೈರ್ಯವನ್ನು ಹೇಳಿದನು?
ಉತ್ತರ: ಅಭಯರುಚಿಯು ತನ್ನ ತಂಗಿಯಾದ ಅಭಯಮತಿಯನ್ನು ಕುರಿತು "ನೀತಿವಂತಳೇ ಕೇಳು, ವಿಧಿ ನಿಯಮವನ್ನು ಮೀರಲು ಯಾರಿಗೆ ಸಾಧ್ಯವಾಗುತ್ತದೆ? ನಿನಗೆ ಭಯವೇಕೆ? ಇಂತಹ ಸಮಯದಲ್ಲಿ ಬಂದ ಕಷ್ಟವನ್ನು ಸಹಿಸಿಕೊಳ್ಳಬೇಕು. ಸಂಭವಿಸುವ ಪರಿಷಹಗಳನ್ನು (೨೨ ಬಗೆಯ ಕ್ಲೇಶಗಳನ್ನು) ಜಯಿಸುವುದೇ ನಿಜವಾದ ತಪಸ್ಸು; ತಪಸ್ಸಿಗೆ ಬೇರೆ ಎರಡು ಕೋಡು/ಕೊಂಬುಗಳಿವೆಯೇ? " ಎಂದು ಧೈರ್ಯ ಹೇಳಿದನು.

15. ಪಂಡರಿಬಾಯಿಯವರು ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳನ್ನು ವಿವರಿಸಿ.
ಉತ್ತರ: ಚಿಕ್ಕಂದಿನಿಂದಲೇ ಪಂಡರಿಬಾಯಿ ಅವರಿಗೆ ಸಂಗೀತದ ಅಭ್ಯಾಸವಾಗಿತ್ತು. ಹರಿಕಥೆ ಮಾಡುವುದನ್ನು ಹಾಗೂ ಕೀರ್ತನೆ ಹಾಡುವುದನ್ನು ಇವರು ಕಲಿತಿದ್ದರು. ಅಲ್ಲದೆ ಮನೆಯಲ್ಲಿದ್ದ ಸೃಜನಶೀಲ ವಾತಾವರಣ ಪಂಡರಿಬಾಯಿಯವರ 'ಕಲಾವಿದೆ' ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿತು.

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **2 × 2 = 04**

| | |
|---|---|
| **ಆಯ್ಕೆ : ಕರ್ತೃ – ಆಕರ – ಪಠ್ಯ** | **1 ಅಂಕ** |
| **ಸಂದರ್ಭ : ಯಾರು – ಯಾರಿಗೆ – ಯಾವಾಗ** | **1 ಅಂಕ** |
| **ಒಟ್ಟು** | **2 ಅಂಕಗಳು** |

16. "ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯನಿಕ್ಕುವುದು"
ಉತ್ತರ: ಆಯ್ಕೆ:- ಈ ವಾಕ್ಯವನ್ನು ಶ್ರೀ ಬಿ.ಎಂ.ಶ್ರೀ ಅವರು ಸಂಪಾದಿಸಿರುವ 'ಕನ್ನಡ ಬಾವುಟ' ಕೃತಿಯಿಂದ ಆಯ್ದ 'ಧರ್ಮಸಮದೃಷ್ಟಿ' ಶಾಸನದಿಂದ ಆರಿಸಲಾಗಿದೆ.
ಸಂದರ್ಭ:- ರಾಜನಾದ ವೀರಬುಕ್ಕರಾಯನು ಜೈನಧರ್ಮದ ಸುಧಾರಣೆಗಾಗಿ ಕೈಗೊಳ್ಳಬೇಕಾದ ಕಾರ್ಯಗಳನ್ನು ಸೂಚಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.
ಸ್ವಾರಸ್ಯ:- ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿದು ಪುನಶ್ಚೇತನಗೊಳಿಸಬೇಕು ಎಂಬ ವಿಶಾಲ ಮನೋಭಾವನೆಯನ್ನು ಈ ಮಾತಿನಲ್ಲಿ ಕಾಣಬಹುದಾಗಿದೆ.

17. "ಚಂದಿರನೋ ಭಾಸ್ಕರನೋಯೆಂಬಂತೆ"
ಉತ್ತರ: ಉತ್ತರ: ಆಯ್ಕೆ:- ಈ ವಾಕ್ಯವನ್ನು ರತ್ನಾಕರವರ್ಣಿಯ 'ಭರತೇಶ ವೈಭವ' ಕೃತಿಯಿಂದ ತೆಗೆದುಕೊಳ್ಳಲಾಗಿರುವ 'ಸಿರಿಯನಿನ್ನೇನ ಬಣ್ಣಿಪೆನು' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಭರತ ಚಕ್ರವರ್ತಿಯು ಆಸ್ಥಾನದಲ್ಲಿ ಕಾಂತಿಯಿಂದ ಕಂಗೊಳಿಸುತ್ತಿದ್ದ ದೃಶ್ಯವನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಮಾತನ್ನು ಹೇಳಿದ್ದಾನೆ. ಚಾಮರಗಳ ಸಾಲಿನ ಹಿಂದೆ ಸಿಂಹಾಸನದಲ್ಲಿ ಕುಳಿತಿದ್ದ ಭರತ ಚಕ್ರವರ್ತಿಯು 'ಆಗಸದಲ್ಲಿ ತೇಲುವ ಬಿಳಿ ಮೋಡಗಳ ಹಿಂದೆ ಆಗಾಗ ತೋರಿ ಮರೆಯಾಗುವ ಚಂದ್ರನೋ ಸೂರ್ಯನೋ' ಎಂಬಂತೆ ಕಂಗೊಳಿಸಿದನು.
ಸ್ವಾರಸ್ಯ: ಬಿಳಿ ಬಣ್ಣದ ಚಾಮರಗಳನ್ನು ಮೋಡವಾಗಿಯೂ ಭರತೇಶನನ್ನು ಸೂರ್ಯ-ಚಂದ್ರರಾಗಿಯೂ ಕಲ್ಪಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಕೃತಿಗಳನ್ನು ಪರಿಚಯಿಸಿ, ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ. 1×2=2**

| | |
|---|---|
| **ಸ್ಥಳ, ಕಾಲ** | **1 ಅಂಕ** |
| **ಕೃತಿ, ಪ್ರಶಸ್ತಿ** | **1 ಅಂಕ** |
| **ಒಟ್ಟು** | **2 ಅಂಕಗಳು** |

18. ಶಿವರಾಮ ಕಾರಂತ:

ಉತ್ತರ: ಶಿವರಾಮ ಕಾರಂತರು ಕ್ರಿಸ್ತ ಶಕ 1902ರಲ್ಲಿ ಉಡುಪಿ ಜಿಲ್ಲೆಯ ಕೋಟದಲ್ಲಿ ಜನಿಸಿದರು. ಇವರ ಪ್ರಮುಖ ಕೃತಿಗಳು: ಚೋಮನದುಡಿ, ಮರಳಿಮಣ್ಣಿಗೆ, ಬೆಟ್ಟದಜೀವ, ಅಳಿದಮೇಲೆ, ಹಸಿವು, ಹಾವು, ಕವಿ, ಕರ್ಮ, ಕವನ ರಾಷ್ಟ್ರಗೀತ ಸುಧಾಕರ ಮತ್ತು ಸೀಳ್ಗವನಗಳು, ಪ್ರವಾಸ ಕಥನಗಳು: ಅಬುವಿನಿಂದ ಬರಾಮಕ್ಕೆ, ಅಪೂರ್ವ ಪಶ್ಚಿಮ, ಅರಸಿಕರಲ್ಲ, ಪಾತಾಳಕ್ಕೆ ಪಯಣ, ಹುಚ್ಚು ಮನಸ್ಸಿನ ಹತ್ತು ಮುಖಗಳು ಎಂಬ ಆತ್ಮಕಥನ, ಯಕ್ಷಗಾನ ಬಯಲಾಟ – ಜಾನಪದ ಸಾಹಿತ್ಯ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಂಪ ಪ್ರಶಸ್ತಿ ಲಭಿಸಿದೆ.

19. **ಪದ್ಯಭಾಗವನ್ನು ಪೂರ್ಣಗೊಳಿಸಿರಿ.(ಪ್ರತಿ ಸಾಲಿಗೆ 1/2 ಅಂಕ ದುಂಡಾದ ಅಕ್ಷರಕ್ಕೆ ½ಅಂಕ) 1 × 2 = 2**

ದಟ್ಟ ಕಾಡಿನಲೊಂದು ಹೆಮ್ಮರದ ಹೊದರಿನಲಿ
ಇರುತ್ತಿತ್ತು ಪುಟ್ಟ ಸಂಸಾರ ಹೂಡಿ
ಮುದ್ದು ಬಿಳಿ ಪಾರಿವಾಳಗಳ ಜೋಡಿ

**ಅಥವಾ**

ಹಗಲಿರುಳು ಜೊತೆಗೂಡಿ ಬಾಳಿದವು ಈ ಜೋಡಿ
ಎಂದಿಗೂ ಅಗಲಿರವು ಒಂದನೊಂದು
ಹಿಗ್ಗು ತುಂಬಿತು ಹೊದರಿನಲ್ಲಿ ಬಂದು

**ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.**

**1 × 2 = 2**

20. ಕಿಱಿವರೆಯದ ಶುಭಲಕ್ಷಣ
ದಱಿಕೆಯ ಸತ್ಕುಲದ ಮರ್ತ್ಯಯುಗಲಕಮಂ ತಾ
ನಱಸಲ್ ಬಳರಿಯ ಬನದಿಂ
ಪೊಱಮಟ್ಟಂ ಚಂಡಕರ್ಮನೆಂಬ ತಳಾಱಂ

ಈ ಪದ್ಯಭಾಗವನ್ನು ಜನ್ನನ 'ಯಶೋಧರ ಚರಿತೆ' ಕೃತಿಯಿಂದ ಆರಿಸಿರುವ ನಿಯತಿನಾರ್ ಮೀಱಿದಪರ್ ಪದ್ಯಭಾಗದಿಂದ ಆರಿಸಿಕೊಂಡಿದೆ.

ಚಂಡಮಾರಿಯನ್ನು ಅರ್ಚಿಸಲು ಇಬ್ಬರು ಮನುಷ್ಯರನ್ನು ಕರೆತರಬೇಕೆಂದು ಚಂಡಕರ್ಮನೆಂಬ ತಳಾರನಿಗೆ ರಾಜನು ಇಲ್ಲಿ ಆದೇಶಿಸುತ್ತಾನೆ. ಚಿಕ್ಕ ವಯಸ್ಸಿನ, ಶುಭಲಕ್ಷಣದ, ಸತ್ಕುಲದ ಇಬ್ಬರನು ಮನುಷ್ಯರನ್ನು ಅರಸುತ್ತ ಕಟುಕರ ವನದಿಂದ ಚಂಕಡರ್ಮನೆಂಬ ತಳಾಱನು ಹೊರಟನು ಎಂದು ವಿವರಿಸಿದೆ.

ಚಂಡಕರ್ಮನು ದೇವಿಯನ್ನು ಅರ್ಚಿಸಲು ನರಬಲಿಯನ್ನು ನೀಡಲು ಹೊರಟಿದ್ದು ಆತನ ಕ್ರೌರ್ಯವನ್ನು ಬಿಂಬಿಸುತ್ತದೆ.

| | |
|---|---|
| **ಪದ್ಯದ ಆಯ್ಕೆ ಮತ್ತು ಸಂದರ್ಭದ ವಿವರಣೆ** | **1 ಅಂಕ** |
| **ಸಾರಾಂಶ** | **1 ಅಂಕಗಳು** |
| **ಒಟ್ಟು** | **2 ಅಂಕಗಳು** |

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1 × 4 = 4**

21. ರಾಧಾಕೃಷ್ಣನ್ **ಅವರು ಅಧ್ಯಾಪಕರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ವಿವರಿಸಿ.**

**ಉತ್ತರ:** ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ಉಪಪ್ರಾಧ್ಯಾಪಕರಾಗಿ ಹಾಗೂ ಕೋಲ್ಕೊತಾದಲ್ಲಿ (ಹಿಂದಿನ ಕಲ್ಕತ್ತಾ) ಪ್ರಾಧ್ಯಾಪಕರಾಗಿ ಸಲ್ಲಿಸಿದ ಸೇವೆ ಸ್ಮರಣೀಯ. ಅಲ್ಲದೆ ಆಂಧ್ರ, ದೆಹಲಿ, ಬನಾರಸ್

ವಿಶ್ವವಿದ್ಯಾಲಯಗಳಲ್ಲಿ ಕುಲಪತಿಯಾಗಿ ಸೇವೆ ಸಲ್ಲಿಸಿ, ಅವುಗಳ ಪುರೋಭಿವೃದ್ಧಿಗೆ ಶ್ರಮಿಸಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲದಲ್ಲೂ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ರಾಧಾಕೃಷ್ಣನ್ ಅವರ ಬೋಧನಾ ಶೈಲಿ, ನಿರರ್ಗಳತೆ, ವಿಷಯದ ಮೇಲಿನ ಪ್ರಭುತ್ವ ವಿದ್ಯಾರ್ಥಿಗಳನ್ನು ಬಹುಬೇಗ ಆಕರ್ಷಿಸಿತು. ತಮ್ಮ ಪ್ರಾಧ್ಯಾಪಕತ್ವವನ್ನು ಯಾವಾಗಲೆಂದರೆ ಆವಾಗ ಕಳಚಿ ಏರು ಜವ್ವನದ ಯುವಕರಂತೆ ಹಾಸ್ಯ ವಿನೋದಗಳಲ್ಲಿ ತೊಡಗುತ್ತಿದ್ದರು.

**ಅಥವಾ**

**ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನೀಡಿದ ಬೀಳ್ಕೊಡುಗೆಯ ವಿಶೇಷತೆಯನ್ನು ಕುರಿತು ವಿವರಿಸಿ.**

**ಉತ್ತರ:** ರಾಧಾಕೃಷ್ಣನ್ ಅವರು ಕೋಲ್ಕೊತ ವಿಶ್ವವಿದ್ಯಾಲಯದ ತತ್ತ್ವಶಾಸ್ತ್ರ ಪ್ರಾಧ್ಯಾಪಕರಾಗಿ ನೇಮಕಗೊಂಡಾಗ ಮೈಸೂರಿನಿಂದ ಹೊರಟ ದಿನ ಅವರಿಗೆ ಕೊಟ್ಟಂತಹ ವೈಭವದ ಬೀಳ್ಕೊಡುಗೆ ಯಾವ ಚಕ್ರವರ್ತಿಗೂ ದೊರೆತಿರಲಾರದು. ರಾಧಾಕೃಷ್ಣನ್ ಅವರನ್ನು ಮಹಾರಾಜ ಕಾಲೇಜಿನಿಂದ ರೈಲು ನಿಲ್ದಾಣಕ್ಕೆ ಕರೆದೊಯ್ಯುವಾಗ ಸಾರೋಟಿಗೆ ಕುದುರೆಯನ್ನು ಕಟ್ಟಲಿಲ್ಲ. ಸ್ವತಃ ವಿದ್ಯಾರ್ಥಿಗಳೇ ಎಳೆದೊಯ್ದರು. ರಾಧಾಕೃಷ್ಣನ್ ಅವರಿಗಾಗಿ ಕಾದಿರಿಸಿದ್ದ ಕಂಪಾರ್ಟ್‌ಮೆಂಟನ್ನು, ಒರಗುದಿಂಬು ಹಾಗೂ ರತ್ನಗಂಬಳಿಯನ್ನು ಹಾಸಿ ಮಲಗುವ ಸೀಟನ್ನು, ನೆಲವನ್ನು ಹೂವಿನಿಂದ ಸುಪ್ಪತ್ತಿಗೆಯಂತೆ ಮಾಡಿ ದೈವಮಂದಿರವನ್ನು ಭಕ್ತರು ಅಲಂಕರಿಸುವಂತೆ ಅಲಂಕರಿಸಲಾಗಿತ್ತು. "ರಾಧಾಕೃಷ್ಣನ್ ಅವರಿಗೆ ಜಯವಾಗಲಿ" ಎಂಬ ಕೂಗು ರೈಲ್ವೆ ಸ್ಟೇಷನ್ನಿನ ಆವರಣದಲ್ಲೆಲ್ಲ ಮೊಳಗುತ್ತಿತ್ತು. ಆ ದಿನ ಭಾವೋದ್ರೇಕದಿಂದ ಎಷ್ಟೋ ಜನ ಅತ್ತರು. ವಿದ್ಯಾರ್ಥಿಗಳು ತೋರಿದ ವಿಶ್ವಾಸ ಅವರ ಕಣ್ಣಿನಲ್ಲೂ ನೀರು ತಂದಿತು.

| | |
|---|---|
| **ಉತ್ತರದ ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ** | **3 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕಗಳು** |
| **ಒಟ್ಟು** | **4 ಅಂಕಗಳು** |

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1 × 2 = 2**

22. ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವೇನು?

**ಅಥವಾ**

ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ.

| | |
|---|---|
| **ಗಾದೆಯ ಮಹತ್ತ್ವದ ವಿವರಣೆ** | **1 ಅಂಕ** |
| **ಉದಾಹರಣೆಯೊಂದಿಗೆ ಅರ್ಥ ವಿವರಣೆ** | **1 ಅಂಕ** |
| **ಒಟ್ಟು** | **2 ಅಂಕಗಳು** |

23. ನಿಮ್ಮನ್ನು ಅರಸೀಕೆರೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ರಘು/ರಾಗಿಣಿ ಎಂದು ಭಾವಿಸಿಕೊಂಡು, ನಿಮ್ಮ ಅಣ್ಣನ ವಿವಾಹದಲ್ಲಿ ಪಾಲ್ಗೊಳ್ಳಲು ಎರಡು ದಿನಗಳ ರಜೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ರಜೆ ಪತ್ರ ಬರೆಯಿರಿ. **1 × 4 = 4**

**ಅಥವಾ**

ನಿಮ್ಮನ್ನು ವಿವೇಕಾನಂದ ಪ್ರೌಢಶಾಲೆ, ಮುಂಡಗೋಡದ ವಿದ್ಯಾರ್ಥಿ ಪ್ರೀತಿ/ಪ್ರೀತಮ್ ಎಂದು ಭಾವಿಸಿಕೊಂಡು, ಹಾಸನದಲ್ಲಿ ವಾಸವಾಗಿರುವ ನಿಮ್ಮ ತಂದೆ 'ದೇವಪ್ಪ' ಎಂಬುವವರಿಗೆ ನಿಮ್ಮ ಶಾಲೆಯಲ್ಲಿ ನಡೆದ ಕ್ರೀಡಾಕೂಟದ ಕುರಿತು ಪತ್ರ ಬರೆಯಿರಿ.

| | |
|---|---|
| **ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ** | **1 ಅಂಕ** |
| **ಪತ್ರದ ಒಡಲು – ವಿಷಯ ನಿರೂಪಣೆ** | **1 ಅಂಕಗಳು** |
| **ಮುಕ್ತಾಯ, ಇಂತಿ ಸಂಬೋಧನೆ, ಸಹಿ, ಹೊರ ವಿಳಾಸ** | **1 ಅಂಕ** |
| **ಭಾಷಾ ಶೈಲಿ, ಪದಬಂಧ, ವಿನ್ಯಾಸ** | **1 ಅಂಕ** |
| **ಒಟ್ಟು** | **4 ಅಂಕಗಳು** |